**ಕಾರ್ಕಳಕ್ಕೆ ಸಮೀಪದ ಕುರಿಂಗಲ್ಲು ಹೆಸರಿನಲ್ಲೇ ಸೂಜಿಗಲ್ಲಿನ ಸೆಳೆತವಿದೆ. ಬೆಟ್ಟ ಹತ್ತಿ ನಿಂತರೆ ಕುದುರೆಮುಖದ ವಿಶಾಲ ಗಿರಿಶ್ರೇಣಿಗಳ ಅಪೂರ್ವ ಚೆಲುವು ಮೈಮನಗಳಲ್ಲಿ ಮಿಂಚು ಹರಿಸುತ್ತದೆ. ಕುರಿಂಗಲ್ಲು ಚಾರಣದ ರಮ್ಯ ಕಥನ, ಸಾಹಸಪ್ರಿಯರನ್ನು ಪ್ರಯಾಣಕ್ಕೆ ಪ್ರೇರೇಪಿಸುವಂತಿದೆ.**



ಅದು ಕುಡಿದು ಕುಡಿದು ಹೊಟ್ಟೆ ತುಂಬಿದ ಮೇಲೆ ಬಿದ್ದು ಹೋಗ್ತವೆ, ತಗೊಳ್ಳಿ ಬೇಕಿದ್ದರೆ ಹೊಗೆಸೊಪ್ಪು ಇದೆ ಹಚ್ಚಿಬಿಡಿ ಕಾಲಿಗೆ' ಎಂದ ನಮ್ಮ ಗುಂಪಿನ ಸದಸ್ಯರಾದ ಜೋಶಿಯವರು.

ಅಲ್ಲೊಂದು ಬೆಟ್ಟ, ಇಲ್ಲೊಂದು ಮುಗಿಲು

ಮತ್ತೆ ಉರಿಬಿಸಿಲಿನಲ್ಲಿ ಪಯಣ ಶುರುವಾಗಿ ಎಷ್ಟೋ ದೂರ ಸಾಗಿದ ಮೇಲೆ, ದೂರದಿಂದ ಕಾಣುತ್ತಿದ್ದ ಕುರಿಂಗಲ್, 'ನೋಡಿ ನಾನು ಇಲ್ಲಿದ್ದೇನೆ' ಎನ್ನುತ್ತಾ, ತನ್ನ ಸಕಲ ಅಂಗಗಳನ್ನು ಪ್ರದರ್ಶಿಸುತ್ತಾ ನಿಂತಿತ್ತು. 'ಅಬ್ಬಾ!' ಎಂದು ಎಲ್ಲರಲ್ಲೂ ಈಗ ಜೀವಸಂಚಾರ, ಉಲ್ಲಾಸದ ಹೂಂಕಾರ. ಎಷ್ಟೋ ಮೈಲು ನಡೆದು ಕೊನೆಗೂ ಸಿಗಬೇಕಾಗಿದ್ದು ಸಿಕ್ಕಿ, ಕಾಣಬೇಕಾಗಿದ್ದನ್ನು ಕಾಣುವಾಗ ದೇಹದ ದಣಿವೆಲ್ಲಾ ಮಾಯವಾಗಿರುತ್ತದೆ. ಚಳಿಗಾಲದ ಮಧ್ಯಾಹ್ನದಲ್ಲಿ ಸೂರ್ಯನನ್ನು ಇನ್ನೇನು ಮುಟ್ಟೇಬಿಡುತ್ತೇನೆ ಎನ್ನುವಂತೆ ನಿಂತಿದ್ದ ಕುರಿಂಗಲ್ ನೋಡುತ್ತಾ ಅಷ್ಟೊತ್ತಿನ ದಣಿವೆಲ್ಲಾ ಪಾತಾಳಕ್ಕಿಳಿದು ಹೋಯ್ತು.

ಭಾರಿ ಎತ್ತರದಲ್ಲಿ ನಿಂತಿದ್ದ ಕುರಿಂಗಲ್‌ನ ತುತ್ತತುದಿಗೆ ಹೋಗುವ ದಾರಿ, ಮೊಣಕಾಲಿನೆತ್ತರದ ಹುಲ್ಲು ಬೆಳೆದು ಮೋಹಕವಾಗಿತ್ತು. ನಡೆದಂತೆಲ್ಲಾ ಗಾಳಿ ಜೋರಾಗುತ್ತಿತ್ತು. ಅಲ್ಲೇ ಯಾವ ಹಂಗೂ ಇಲ್ಲದೇ ಅರಳಿ ನಿಂತಿದ್ದ ಗುರಗಿ ಹೂವಿನ ಗುಂಪಿನಲ್ಲಿ ಚಿಟ್ಟೆಗಳು ಆಟವಾಡುತ್ತಿದ್ದವು. ಮೇಲಕ್ಕೆ ಹೋದಂತೆಲ್ಲಾ ಕಾಣುತ್ತಿದ್ದ ಕುದುರೆಮುಖದ ವಿಶಾಲ ಗಿರಿಶ್ರೇಣಿಗಳು ಹರಡಿನಿಂತಿದ್ದ ಚಂದವನ್ನು ಇಲ್ಲಿ ವರ್ಣಿಸಲು ಸಾಧ್ಯವೇ ಇಲ್ಲ. ಮಧ್ಯಾಹ್ನದ ಬಿಸಿಲಿಗೆ ಶೋಲಾ ಹುಲ್ಲುಗಾವಲು ಒಂದು ಕಡೆ ಬಿಸಿಲಿಂದ ಹೊಳೆಯುತ್ತಿದ್ದರೆ, ಮತ್ತೆ ಕೆಲವು ಕಡೆ ನೆರಳಿನಿಂದ ಸುತ್ತುವರೆದು, ತಿಳಿಹಸಿರಿನಿಂದ ಮಿನುಗುತ್ತಿತ್ತು.

ಭಾರಿ ದೂರದ ಶೋಲಾ ಹುಲ್ಲುಗಾವಲಿನಲ್ಲಿ ಯಾವುದೋ ಪ್ರಾಣಿಗಳ ಗುಂಪೊಂದು ಸರಿದದ್ದು ತೀರಾ ಅಸ್ಪಷ್ಟವಾಗಿ ಕಂಡಿತು. ಕಣ್ಣನ್ನು ಮತ್ತೆ ದೊಡ್ಡದು ಮಾಡಿಕೊಂಡು ನೋಡಿದರೆ, ಕಾಡುಕೋಣಗಳ ಗುಂಪೊಂದು ಕಾಡಿನಲ್ಲಿ ನಿರ್ಭಯವಾಗಿ ಓಡಾಡಿಕೊಂಡಿತ್ತು. ನಮ್ಮ ಗುಂಪಿನಲ್ಲಿ ಯಾರೋ ಒಬ್ಬರು 'ಓ ಹೋ' ಅಂತ ಬೊಬ್ಬೆ ಹಾಕಿದ್ದೇ, ಆ ಸದ್ದು ಆ ಕಾಡುಕೋಣಗಳಿಗೆ ಕೇಳಿಸಿ, ಅವು ಭಯದಿಂದ ಅಲ್ಲಿಂದ ಪಲಾಯನ ಮಾಡಿ, ಹುಲ್ಲುಗಾವಲಿನ ನಡುವೆ ಮರೆಯಾಗಿ ಹೋದವು. ಮನುಷ್ಯನ ಸದ್ದಿಗೇ ಪಾಪ ಇವು ಹೆದರಿಬಿಡುತ್ತವೆ, ಇನ್ನು ನಮ್ಮ ಕ್ರೌರ್ಯಕ್ಕೆ ಅದೆಷ್ಟು ಹೆದರಬಹುದು. ಕಾಡುಕೋಣಗಳನ್ನು ಬೇಟೆಯಾಡಿ ಅವುಗಳ ಬದುಕು ಕಸಿದುಕೊಳ್ಳುವ ನಮ್ಮ ದುರುಳತನ, ಆಸೆಬುರುಕತನ ಇನ್ನು ಕೆಲವೇ ಕಾಲದಲ್ಲಿ ಇಂತಹ ಅಪೂರ್ವ ಕಾಡುಗಳನ್ನು, ಪ್ರಾಣಿಗಳನ್ನೂ ನಾಶಮಾಡಿದರೂ ಅಚ್ಚರಿಯಿಲ್ಲ ಅನ್ನಿಸಿತು. ಬೆಟ್ಟದ ಎತ್ತರದಲ್ಲಿ ಕನಸುಗಳು ಹತ್ತಿರವಾಗತೊಡಗಿದಂತೆ ಮನಸ್ಸು ಶಾಂತವಾಯಿತು.

ದೂರದಿಂದ ಒಂದು ಕಾಲದಲ್ಲಿ ಕುದುರೆಮುಖದ ಕಾಡನ್ನೇ ನಾಶಮಾಡಲು ಹೊಂಚು ಹಾಕಿದ್ದ ಅದಿರು ಕಂಪನಿ, ಅದಿರು ಕೊರೆದ ಬೆಟ್ಟದ ನೆತ್ತಿ ಕಪ್ಪಗೇ ಹೊಳೆಯುತ್ತಿತ್ತು. ಇನ್ನೂ ಆ ಕಂಪನಿ ಇದ್ದರೆ ಇಡೀ ಪಶ್ಚಿಮಘಟ್ಟವನ್ನೇ ನಾಶಮಾಡುತ್ತಿತ್ತು ಅನ್ನಿಸಿತು. ಈಗಾಗಲೇ ಈ ಕಾಡಿನಲ್ಲಿ ನಮಗೆ ಹಕ್ಕಿಗಳ ಚಲನವಲನ, ಸಹಜ ಕಾಡಿನ ಚಟುವಟಿಕೆ ಕೊಂಚ ಕೊಂಚವೇ ಮರೆಯಾಗುತ್ತಿರುವಂತೆ ಭಾಸವಾಯ್ತು. ಈ ಕಾಡು ಹೀಗೇ ಉಳಿಯಲಿ, ಬೆಳೆಯಲಿ ಅಂತೆಲ್ಲಾ ನಾವು ಕಾಣದ ದೇವರಿಗೆ ಪ್ರಾರ್ಥಿಸುತ್ತ ಕುರಿಂಗಲ್‌ನ ತುತ್ತ ತುದಿಯಲ್ಲಿ ಪ್ರಕೃತಿಯ ದೊಡ್ಡ ಮಾಯೆ ಎಂಬಂತೆ ನಿಂತಿದ್ದ ಬಂಡೆಗಲ್ಲನ್ನು ನೋಡುತ್ತ, ಮತ್ತೆ ಪ್ರಪಾತದಂತಿರುವ ದಾರಿ ಇಳಿಯುವಾಗ ಮಧ್ಯಾಹ್ನ ಸರಿದಿತ್ತು. ವಾಪಸ್ ಹೊರಡಲು ಭಗವತಿ ಹೊಳೆಯ ದಿಕ್ಕಿನಲ್ಲಿ ಸಾಗಿದೆವು.

ಭಗವತಿ ಹೊಳೆ ಸರಿದು, ನಮ್ಮ ಇಡೀ ಗುಂಪು ರಸ್ತೆಗೆ ಬಂದು ನಿಂತಾಗ ಜಲ್ಲಿ ಕಲ್ಲು ತುಂಬಿಸುವ ಖಾಲಿ ಟಿಪ್ಪರ್ ಒಂದು ಹಗೂರಾಗಿ ಬರುತ್ತಿತ್ತು. ಗುಂಪಿನ ಯಾರೋ ಕೈ ತೋರಿಸಿದ್ದಕ್ಕೆ ಟಿಪ್ಪರ್ ನಿಂತಿತು. ನಾವೆಲ್ಲ ಟಿಪ್ಪರ್‌ಗೆ ಹತ್ತಿ ನಿಂತೆವು. ಆಹಾ! ವೇಗವಾಗಿ ಹೋಗುತ್ತಿದ್ದ ಆ ಟಿಪ್ಪರ್‌ನಲ್ಲಿ ನಿಂತು, ಮತ್ತೆ ಕುದುರೆಮುಖ ಕಾಡಿನ ನೆತ್ತಿಯನ್ನು ನೋಡುವ ಅನುಭವವೇ ಇನ್ನೊಂಥರಾ ಸುಖ.

ಟಿಪ್ಪರ್ ಮಾಳಕ್ಕೆ ಬಂದು ನಿಂತಾಗ, ಎಷ್ಟೋ ಮೈಲು ದೂರದಲ್ಲಿ ಕಾಣಿಸುತ್ತಿದ್ದ ಕುರಿಂಗಲ್ ಬೆಟ್ಟ, ನಾವಿವತ್ತು ಅಲ್ಲಿಗೆ ಹೋದದ್ದು, ನಕ್ಕಿದ್ದು, ಅದರ ಬೆನ್ನು ಸವರಿದ್ದು, ಅದನ್ನು ಪ್ರೀತಿ ಮಾಡಿದ್ದು ಇವ್ಯಾವುದೂ ಗೊತ್ತೇ ಇಲ್ಲ ಎನ್ನುವಂತೆ ನಿಂತಿತ್ತು.

